◆ **ಭಕ್ತಿಪಂಥದ ಪ್ರಭಾವವಾಗಲೀ, ಹೆಚ್ಚು ಧಾರ್ಮಿಕ ಆಚರಣೆಗಳಾಗಲೀ ಇಲ್ಲದ ಕಥಕಳಿ ಕಲಾಪ್ರಕಾರವು ಶಾಸ್ತ್ರೀಯ ಕಲೆಯೆಂದು ಗುರುತಿಸಿಕೊಂಡು ಬೆಳೆದ ಬಗೆಯನ್ನು ವಿವರಿಸುವಿರಾ? ಈ ಬೆಳವಣಿಗೆಯಲ್ಲಿ ನಿಮ್ಮ ದೆಹಲಿ ದಿನಗಳ ಪಾತ್ರವೇನು?**

ನಾನು ದೆಹಲಿಯ 'ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಕಥಕಳಿ ಆರ್ಟ್ಸ್'ನ ನಿರ್ದೇಶಕನಾಗಿ ಹೋದಾಗ ಅದು ಹೆಸರಿಗಷ್ಟೇ 'ಅಂತರರಾಷ್ಟ್ರೀಯ'ವಾಗಿತ್ತೇ ಹೊರತು, ಅಲ್ಲಿ ಸೌಕರ್ಯಗಳು ಏನೂ ಇರಲಿಲ್ಲ. ಅದು ಎರಡು ವರ್ಷಗಳಿಂದ ಸ್ಥಗಿತಗೊಂಡಿತ್ತು. ಇಡೀ ಕೇಂದ್ರಕ್ಕೆ ಹೊಸ ಕಾಯಕಲ್ಪ ನೀಡುವ ಜವಾಬ್ದಾರಿ ನನ್ನ ಮೇಲಿತ್ತು. ಹಾಗಾಗಿ ನಾನು ಕಥಕಳಿ ಪ್ರದರ್ಶನವನ್ನು ಅಂತರರಾಷ್ಟ್ರೀಯ ಪ್ರೇಕ್ಷಕರಿಗೆ ಅರ್ಥವಾಗುವಂತೆ ಪ್ರಸ್ತುತಪಡಿಸಲು ನಿರ್ಧರಿಸಿದೆ. ಅಂದರೆ ಪ್ರತಿ ಪ್ರದರ್ಶನದಲ್ಲಿ ಪ್ರಾತ್ಯಕ್ಷಿಕೆ ಆಧಾರಿತ ಪ್ರದರ್ಶನವನ್ನು ಪ್ರಸ್ತುತಪಡಿಸಲು ನಿರ್ಧರಿಸಿದೆವು. ಒಂದು ಕಥೆಯನ್ನು ಆಯ್ಕೆ ಮಾಡಿಕೊಂಡರೆ, ಅದನ್ನು ಪ್ರದರ್ಶಿಸುವ ಮುನ್ನ ಪುಟ್ಟದೊಂದು ಪ್ರಾತ್ಯಕ್ಷಿಕೆ ನೀಡಿ, ಕಥೆಯನ್ನೂ, ಅಭಿನಯದ ಸುಳುಹುಗಳನ್ನೂ ಪ್ರೇಕ್ಷಕರಿಗೆ ನೀಡುವುದು. ಹೀಗೆ ಹೊಸ ಪ್ರೇಕ್ಷಕರನ್ನು ಮುಖಾಮುಖಿಯಾಗುವ ವೇಳೆಗೆ ಕಥಕಳಿಯ ಮೂಲ ಆಶಯಕ್ಕೆ ಧಕ್ಕೆ ಬಾರದಂತೆ ಕೊಂಚವಾದರೂ ರಾಜಿ ಆಗಬೇಕಾಗುತ್ತದೆ. ಇದೇವೇಳೆ ಕೇಂದ್ರದಲ್ಲಿ ಬೇಕಾದ ಮೂಲಸೌಕರ್ಯಗಳನ್ನು ಕಲಾವಿದರಿಗಾಗಿ ಸಿದ್ಧಪಡಿಸಿದೆ.

ಹೊಸಕಥೆಗಳನ್ನು ಹೆಣೆದು ವರ್ಷಕ್ಕೆ ಎರಡು ಪ್ರದರ್ಶನಗಳನ್ನು ಸಿದ್ಧಪಡಿಸಿದೆವು. ನಾನು ದೆಹಲಿಗೆ ಹೋದಮೇಲೆ ಕಲಾವಲಯದ ಅನೇಕ ವಿಚಾರಗಳನ್ನು ಅರಿತುಕೊಳ್ಳುವುದಕ್ಕೆ ಅವಕಾಶವಾಯಿತು. ಗಣ್ಯ ವಿದ್ವಾಂಸರ ಸ್ನೇಹದಿಂದಾಗಿ ನನ್ನ ಕಲಾದೃಷ್ಟಿಯು ಇನ್ನಷ್ಟು ವಿಸ್ತಾರವಾಯಿತು. ಇತರ ಕಲಾಪ್ರಕಾರಗಳನ್ನು ಹತ್ತಿರದಿಂದ ಕಂಡು ಅರಿತುಕೊಳ್ಳುವುದು ಕೂಡ ಸಾಧ್ಯವಾಯಿತು. ಆದರೆ ಹಣಕಾಸಿನ ಸ್ಥಿತಿ ಮಾತ್ರ ಮೇಲೇರಲೇ ಇಲ್ಲ. 2007ರಲ್ಲಿಯೂ ನನ್ನ ಸಂಬಳ ಕೇವಲ 8 ಸಾವಿರ ರೂಪಾಯಿ ಆಗಿತ್ತು.

ಕಲಾಕ್ಷೇತ್ರದಲ್ಲಿ ಭರತನಾಟ್ಯ, ಒಡಿಸ್ಸಿ, ಕಥಕ್ ಮುಂತಾದ ಇತರ ಕಲಾಪ್ರಕಾರಗಳ ಕಲಾವಿದರಿಗೆ, ಕಥಕಳಿ ಕಲೆಯೆಂದರೆ ತುಂಬಾ ಗೌರವವಿದೆ ಎಂಬುದು ನನಗೆ ದೆಹಲಿಯಲ್ಲಿ ಅರ್ಥವಾಯಿತು. ಆ ಗೌರವಕ್ಕೆ ಚ್ಯುತಿ ಬಾರದಂತೆ ಕಲಾವಿದರು ನಡೆದುಕೊಳ್ಳಬೇಕು ಎಂದು ನಾನು ಭಾವಿಸಿದ್ದೆ. ನನ್ನ ಜೊತೆಗಾರರಿಗೂ ಅದನ್ನೇ ಹೇಳುತ್ತಿದ್ದೆ. ಯಾವುದೇ ಪ್ರಕಾರದಲ್ಲಿ ಪರಿಣತರಾದ ಕಲಾವಿದರಿರಲಿ, ಅವರು ಬಂದು ಏನಾದರೂ ಸಮಸ್ಯೆಗಳನ್ನು ಕೇಳಿದರೆ, ಸಂಶಯಗಳಿಗೆ ಉತ್ತರವನ್ನು ಬಯಸಿದರೆ ನನಗೆ ಗೊತ್ತಿದ್ದರೆ ತಿಳಿಸುತ್ತಿದ್ದೆ. ಗೊತ್ತಿಲ್ಲದ ವಿಚಾರಗಳಿದ್ದರೆ, ಪುಸ್ತಕಗಳನ್ನು ಓದಿ ತಿಳಿದು ಅವರ ಸಂಶಯ ಬಗೆಹರಿಸುತ್ತಿದ್ದೆ. ಈ ರೀತಿಯ ಬಾಂಧವ್ಯದಿಂದಾಗಿ ನನ್ನ ಜ್ಞಾನವೇ ವೃದ್ಧಿಯಾಯಿತು. ಹೀಗೆ ತುಂಬಾ ಆಪ್ತರಾದವರು ಕಥಕ್ ಗುರು, ಋಷಿಸದೃಶರಾದ ಬಿರ್ಜು ಮಹಾರಾಜ್. ಕಥಕ್ ಅಭ್ಯಾಸ ತರಗತಿಯಲ್ಲೊಮ್ಮೆ ನಾನು ಕಲಾವಿದರ ಅಭ್ಯಾಸ, ಸಂವಾದಗಳನ್ನು ನೋಡುತ್ತಿದ್ದೆ. ಯಾವುದೋ ಒಂದು ಸಂಕೀರ್ಣದ ಕುರಿತು ಮಾತುಕತೆ ನಡೆಯುತ್ತಿದ್ದಾಗ ನಾನು ಆಕಸ್ಮಿಕವಾಗಿ 'ದಿತ್ತತ್ತತ್ತಧಿತ್ತಾದಿಗಿದತ್ತೈ...' ಎಂದು ದನಿಗೂಡಿಸಿದೆ. ಸಾಮಾನ್ಯವಾಗಿ ಇವೆಲ್ಲ ಕಥಕಳಿಯಲ್ಲಿ ಇಲ್ಲದ ಅಂಶಗಳು. ನನ್ನ ದನಿಯನ್ನು ಕೇಳಿದ ಬಿರ್ಜು ಮಹಾರಾಜ್ ಬಹಳ ಸಂತೋಷದಿಂದ ಬಂದು ಕೈಕುಲುಕಿ ಆಲಿಂಗಿಸಿದರು. ಅಂದಿನಿಂದ ನಾವಿಬ್ಬರೂ ಆಪ್ತಸ್ನೇಹಿತರಾಗಿಬಿಟ್ಟೆವು. ಕಲೆಯ ಏಳುಬೀಳುಗಳ ಕುರಿತು ನಾವು ಗಂಟೆಗಟ್ಟಲೆ ಮಾತನಾಡುತ್ತಿದ್ದೆವು. ನಮ್ಮ ನಮ್ಮ ಕಲಾಪ್ರಕಾರಗಳಲ್ಲಿ ಇರುವ ಸೂಕ್ಷ್ಮಗಳೇನು, ಸಂದಿಗ್ಧತೆಗಳೇನು ಎಂದು ಹಂಚಿಕೊಳ್ಳುತ್ತಿದ್ದೆವು. ಹೀಗೆಯೇ ನನಗೆ ದೊರೆತ ಮತ್ತೊಬ್ಬರು ಉತ್ತಮ ಸ್ನೇಹಿತರು ಒಡಿಸ್ಸಿ ನೃತ್ಯ ಕಲಾವಿದೆ ಸೋನಾಲ್ ಮಾನ್‌ಸಿಂಗ್. ಅವರೊಡನೆ ಚರ್ಚೆ, ಸಂವಾದಗಳಷ್ಟೇ ಅಲ್ಲ, ವೇದಿಕೆಯಲ್ಲಿಯೂ ಜೊತೆಯಾಗಿ ಪ್ರದರ್ಶನ ನೀಡುವ ಅವಕಾಶ ಸಿಕ್ಕಿದೆ. ಒಮ್ಮೆ ನಾನು ಕಥಕಳಿ ವೇಷದಲ್ಲಿಯೇ ಅರ್ಜುನನ ಪಾತ್ರದಲ್ಲಿ, ಅವರು ಒಡಿಸ್ಸಿ ವೇಷದಲ್ಲಿಯೇ ಚಿತ್ರಾಂಗದೆಯ ಪಾತ್ರದಲ್ಲಿ ಪ್ರದರ್ಶನ ನೀಡುವ ಪ್ರಸ್ತಾಪ ಬಂತು. 'ಇದು ಚೆನ್ನಾಗಿದೆಯಲ್ಲ' ಎಂದುಕೊಂಡು ಒಪ್ಪಿಕೊಂಡೆ. ಆದರೆ ಚಿತ್ರಾಂಗದೆಯು ಅರ್ಜುನನಿಗೆ ಹೊಡೆಯುವ ದೃಶ್ಯವಿದೆ ಎಂದು ಗೊತ್ತಾದಾಗ,